THE SOCIAL SCIENCE DIALOGUE

*Vol. 3, No. 1, Jan-Jun, 2023* *ISSN 2583-0708*

KUVEMPU UNIVERSITY
THE SOCIAL SCIENCE DIALOGUE
Peer Reviewed Open Access Journal
Prasaranga, Kuvempu University

# ವಾಕ್–ಶ್ರವಣ ದೋಷವುಳ್ಳ ಮಕ್ಕಳ ಸಬಲೀಕರಣದಲ್ಲಿ ಮಾಧ್ಯಮದ ಪಾತ್ರ –ತುಮಕೂರು ಜಿಲ್ಲೆಯ ಅಧ್ಯಯನ

**ಶ್ವೇತ ಎಂ. ಪಿ.·** ಸಂಶೋಧನಾರ್ಥಿ, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು–570 005, ಕರ್ನಾಟಕ.

**ಪುಟ್ಟಸ್ವಾಮಿ ಸಿ. ಕೆ.·** ಪ್ರಾಧ್ಯಾಪಕರು, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು – 570005, ಕರ್ನಾಟಕ.

---

**ಸಾರಾಂಶ:** ವಿವಿಧತೆಯಲ್ಲಿ ಏಕತೆ ಇರುವ ರಾಷ್ಟ್ರ ನಮ್ಮದು. ದೈಹಿಕವಾಗಿ ಮತ್ತು ಮಾನಸಿಕವಾಗಿ ಸದೃಢರಾಗಿರುವ ಜನರು ಒಂದೆಡೆಯಾದರೆ, ಈ ರೀತಿಯ ಸದೃಢತೆ ಇಲ್ಲದ ಜನರು ಮತ್ತೊಂದೆಡೆ. ಅಂಗವಿಕಲರು, ವಿಕಲಾಂಗರು, ದೈಹಿಕ ನ್ಯೂನತೆ ಹೊಂದಿದವರು, ವಿಕಲಚೇತನರು, ದಿವ್ಯಾಂಗರು, ವಿಶೇಷಚೇತನರು ಹೀಗೆ ಹಲವಾರು ಹೆಸರುಗಳಿಂದ ಅಂಗವಿಕಲರನ್ನು ಗುರುತಿಸಲಾಗಿದೆ. ಹದಿನೆಂಟು ವರ್ಷದೊಳಗಿನವರನ್ನು ಮಕ್ಕಳೆಂದು ಗುರುತಿಸಲಾಗಿದೆ. ಈ ರೀತಿಯ ವಿಶೇಷಚೇತನ ಮಕ್ಕಳ ಸಬಲೀಕರಣದಲ್ಲಿ ಮಾಧ್ಯಮದ ಪಾತ್ರ ಅರಿಯುವುದು ಈ ಅಧ್ಯಯನದ ಉದ್ದೇಶ. ಸಬಲೀಕರಣ ಎಂದರೆ ಅವರವರ ಜೀವನದ ಮೇಲೆ ಅವರವರಿಗೆ ನಿಯಂತ್ರಣವನ್ನು ಸಾಧಿಸುವ ಮತ್ತು ಎಲ್ಲಾ ರೀತಿಯ ಪರಿಸ್ಥಿತಿಗಳನ್ನು ಸ್ವತಃ ನಿಭಾಯಿಸಲು ಬೇಕಿರುವ ಶಕ್ತಿಯನ್ನು ತುಂಬುವುದು. ಈ ರೀತಿಯ ಶಕ್ತಿಯನ್ನು ವಿಶೇಷಚೇತನರಿಗೆ ನೀಡಬೇಕಾದರೆ ವಿಶೇಷ ನೆರವು ಮತ್ತು ಯೋಜನೆಗಳು ಬೇಕಾಗುತ್ತವೆ ಮತ್ತು ಈ ಯೋಜನೆಗಳನ್ನು ತಲುಪಿಸುವುದು ಕೂಡ ಮುಖ್ಯವಾಗುತ್ತದೆ. ಯೋಜನೆಗಳನ್ನು ತಲುಪಿಸುವಲ್ಲಿ ಮಾದ್ಯಮಗಳ ಪಾತ್ರವೂ ಮಹತ್ವದ್ದು. ವಿಶೇಷಚೇತನರನ್ನು ಮಕ್ಕಳ ಹಂತದಲ್ಲಿಯೇ ಗುರುತಿಸಿ ಅವರಿಗೆ ಸೂಕ್ತ ಸೌಲಭ್ಯ ಸಹಕಾರಗಳನ್ನು ನೀಡಿದಲ್ಲಿ ಸಮಾಜದ ಮುಖ್ಯವಾಹಿನಿಗೆ ತರಲು ಅನುಕೂಲವಾಗುವುದು. ನಮ್ಮ ಸಮಾಜದಲ್ಲಿನ ಎಲ್ಲರೂ ಪ್ರಗತಿ ಸಾಧಿಸಿದರೆ ಮಾತ್ರ ರಾಷ್ಟ್ರ ಅಭಿವೃದ್ಧಿಯ ಪಥದಲ್ಲಿ ಸಾಗುವುದು. ಈ ನಿಟ್ಟಿನಲ್ಲಿ ವಿಶೇಷಚೇತನರಿಗೆ ಸರ್ಕಾರದ ಸವಲತ್ತುಗಳನ್ನು ತಲುಪಿಸುವುದು ಮತ್ತು ಆ ಮೂಲಕ ಅವರನ್ನು ಮುಖ್ಯವಾಹಿನಿಗೆ ತರಲು ಪ್ರಯತ್ನಿಸುವುದು ಅತ್ಯಾವಶ್ಯಕ. ವಿಶೇಷಚೇತನರಿಗೆ ಸರ್ಕಾರದ ಯೋಜನೆಗಳನ್ನು ತಲುಪಿಸುವುದರಲ್ಲಿ ಮಾಧ್ಯಮದ ಪಾತ್ರವನ್ನು ಅರಿಯುವುದು ಈ ನಿಟ್ಟಿನಲ್ಲಿ ಅವಶ್ಯಕ. ಪ್ರಸ್ತುತ ಅಧ್ಯಯನದಲ್ಲಿ ತುಮಕೂರು ಜಿಲ್ಲೆಯಲ್ಲಿ ವಿಶೇಷಚೇತನರ ಅದರಲ್ಲೂ ವಾಕ್–ಶ್ರವಣ ದೋಷವುಳ್ಳ ಮಕ್ಕಳ ಸಬಲೀಕರಣದಲ್ಲಿ ಮಾಧ್ಯಮದ ಪಾತ್ರವನ್ನು ಅರಿಯಲು ಪ್ರಯತ್ನಿಸಲಾಗಿದೆ.

**ಮುಖ್ಯಪದಗಳು:** ವಿಶೇಷಚೇತನರು, ವಿಕಲಚೇತನರು, ವಾಕ್–ಶ್ರವಣ ದೋಷ, ಸಬಲೀಕರಣ, ಮಾಧ್ಯಮ, ಯೋಜನೆಗಳು.

---